


## ಗೊರಕೆಯನ್ನು ಲಘುವಾಗಿ ಪರಿಗಣಿಸಬೇಡಿ!

ಮಲಗಿದ ಮಗು ಉಸಿರಾಡಲು ಶ್ರಮ ವಹಿಸುತ್ತಿದ್ದರೆ ಪೋಷಕರು ಕೂಡಲೇ ಎಚ್ಚರ ವಹಿಸುವುದು ಸೂಕ್ತ. ನಿದ್ರೆಯಲ್ಲಿ ಉಸಿರಾಟದ ತೊಂದರೆ ಅನುಭವಿಸುವ ಮಕ್ಕಳಲ್ಲಿ ಮಾನಸಿಕ ತೊಂದರೆಗಳು ಕಾಣಿಸಿಕೊಳ್ಳುತ್ತವೆ ಎನ್ನುತ್ತದೆ ಅಮೆರಿಕಾದ ವೈದ್ಯಕೀಯ ಸಂಸ್ಥೆ.

ವೈದ್ಯಕೀಯ ಸಂಸ್ಥೆ ನಿರಂತರವಾಗಿ ಆರು ವರ್ಷಗಳ ಕಾಲ ಸುಮಾರು 11 ಸಾವಿರ ಮಕ್ಕಳನ್ನು ಅಧ್ಯಯನಕ್ಕೆ ಒಳಪಡಿಸಿತ್ತು. ನಿದ್ರಾವಸ್ಥೆಯಲ್ಲಿ ಉಸಿರಾಟದ ತೊಂದರೆ ಇರುವ ಮಕ್ಕಳು ಭಾವನಾತ್ಮಕವಾದ ಕೆಲವೊಂದು ಸಮಸ್ಯೆಯನ್ನು ಅನುಭವಿಸುತ್ತಾರೆ. ಅವರಲ್ಲಿ ಅತಿಯಾದ ಕ್ರಿಯಾಶೀಲತೆ, ಸಿಡುಕಿನ ಸ್ವಭಾವ, ಭಾವನಾತ್ಮಕ ಸಂಬಂಧಗಳಲ್ಲಿ ತೊಡಕು ಕಾಣಿಸಿಕೊಳ್ಳುತ್ತದೆ ಎಂದು ಸಂಶೋಧಕರು ಹೇಳಿದ್ದಾರೆ.

ಕೆಲವರು ಹಾಸಿಗೆಗೆ ಮೈಚಾಚಿ ಮಲಗಿದ ಕೂಡಲೇ ಉಸಿರಾಟದ ಏರಿಳಿತದ ಶಬ್ದವನ್ನು ಲಯವಾಗಿ ಹೊರಹೊಮ್ಮಿಸುತ್ತಾರೆ. ಆಗ ಕೆಲವರು ತಮ್ಮ ಉಸಿರಾಟವನ್ನು ಬಾಯಿಯಿಂದಲೇ ಮಾಡುತ್ತಾರೆ. ಹೀಗೆ ಆಗುವುದು ಸಹಜ ಎಂದು ಪರಿಗಣಿಸಬಾರದು. ಅದು ಅಸಹಜ ಲಕ್ಷಣವಾಗಿದ್ದು ಮಕ್ಕಳ ವರ್ತನೆಯಲ್ಲಿ ಅದರ ಪರಿಣಾಮ ಕಾಣಿಸಿಕೊಳ್ಳುತ್ತದೆ ಎಂಬುದು ಅಧ್ಯಯನದಿಂದ ತಿಳಿದಿದೆ.

ಅಸ್ತವ್ಯಸ್ಥ ಉಸಿರಾಟಕ್ಕೆ ಪಾಲಕರು ಕೂಡಲೇ ಕ್ರಮ ಕೈಗೊಳ್ಳಬೇಕು. ಮಕ್ಕಳ ಉಸಿರಾಟ ಸಮಸ್ಯೆಯನ್ನು ದಾಖಲಿಸಿ ವೈದ್ಯರಿಗೆ ಹೇಳಬೇಕು. ಉಸಿರಾಟದ ತೊಂದರೆಗೆ ಟಾನ್ಸಿಲ್ ಕೂಡ ಕಾರಣ ಇರಬಹುದು (ಗಂಟಲು ಗೆಡ್ಡೆ) ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

## ಹಲ್ಲು ಹುಳುಕು ಎಂದು ಅಳುಕ ಬೇಡಿ!

ದಂತ ಕುಳಿ ಕಂಡು ಚಿಂತಿತರಾಗಬೇಡಿ! ಯಾರಪ್ಪ ಹಲ್ಲಿನ ವೈದ್ಯರ ಬಳಿ ಹೋಗುವುದು? ಒಮ್ಮೆ ಹೋದರೆ ಮತ್ತೆ ಮತ್ತೆ ಬರುವಂತೆ ಹೇಳುತ್ತಾರೆ. ಅದೂ ಅಲ್ಲದೆ ವಿಪರೀತ ಹಲ್ಲಿನ ಬಾಧೆ ತಡೆಯಲು ಆಗುವುದಿಲ್ಲ ಎಂಬ ಗೋಳಾಟ ದೂರ ಮಾಡಲು ಈಗ ಹೊಸ 'ಹಾಲ್' ಎಂಬ ತಂತ್ರಜ್ಞಾನವನ್ನು ಆವಿಷ್ಕರಿಸಲಾಗಿದೆ.

ದಂತಗಳಲ್ಲಿ ಕಾಣುವ ಕುಳಿಗಳನ್ನು ಶೀಘ್ರ ಹಾಗೂ ನೋವು ಇಲ್ಲದಂತೆ ಲೋಹ ತುಂಬಲು ಅನುಕೂಲವಾಗುವಂತೆ ಹಾಲ್ ತಂತ್ರಜ್ಞಾನವನ್ನು ಬ್ರಿಟಿಷ್ ವಿಜ್ಞಾನಿಗಳು ಆವಿಷ್ಕರಿಸಿದ್ದಾರೆ. ಈಗ ದಂತ ಚಿಕಿತ್ಸೆ ಸಂದರ್ಭದಲ್ಲಿ ಅರಿವಳಿಕೆ ನೀಡುತ್ತಾರೆ. ನಂತರ ಹುಳುಕು ಹಲ್ಲನ್ನು ಕೊರೆದು ತೆಗೆದು ಶುದ್ಧಗೊಳಿಸಿ ಆ ನಂತರ ಹಲ್ಲನ್ನು ತುಂಬುತ್ತಾರೆ. ನೂತನ ತಂತ್ರಜ್ಞಾನಕ್ಕೆ ಇಷ್ಟು ದೀರ್ಘ ಕ್ರಿಯೆ ಇರುವುದಿಲ್ಲ. ಚಿಕಿತ್ಸೆ ಕೂಡ ಸುಲಭ ಎನ್ನುವುದು ಸಂಶೋಧಕರ ಅಭಿಮತ.

ನೂತನ ತಂತ್ರಜ್ಞಾನ ಇನ್ನೂ ಪ್ರಾಯೋಗಿಕ ಹಂತದಲ್ಲಿ ಇದ್ದು, ಹುಳುಕು ಹಲ್ಲಿಗೆ ಅರಿವಳಿಕೆ ನೀಡದೆ ಸರಳವಾಗಿ ಚಿಕಿತ್ಸೆ ನೀಡಬಹುದು. ಇದು ಎಳೆಯ ಕಂದಗಳಿಗೆ ಸ್ನೇಹಮಯ ಚಿಕಿತ್ಸೆ ಎಂದು ಸಂಶೋಧಕರು ಅಭಿಪ್ರಾಯಪಟ್ಟಿದ್ದಾರೆ. 50 ದಂತ ವೈದ್ಯರು ಹಾಲ್ ತಂತ್ರಜ್ಞಾನ ಬಳಸಿ 1500 ಮಕ್ಕಳಿಗೆ ಚಿಕಿತ್ಸೆ ನೀಡಿದ್ದಾರೆ.

## ಲಿವರ್‌ಗೂ ಚಿಕಿತ್ಸೆ ಸುಲಭ!

ಜೀವಿಗಳ ಜೈವಿಕ ಕ್ರಿಯೆಯಲ್ಲಿ ಬಹುಮುಖ್ಯ ಪಾತ್ರ ವಹಿಸುವ ಯಕೃತ್ (ಲಿವರ್) ಪ್ರಧಾನ ಅಂಗಗಳಲ್ಲಿ ಒಂದು. ಅದಕ್ಕೆ ಕಾಯಿಲೆ ಬಂದರೆ ಚಿಕಿತ್ಸೆ ಕೂಡ ಕ್ಲಿಷ್ಟಕರ. ದೀರ್ಘಕಾಲದ ಯಕೃತ್ತಿನ ಸಮಸ್ಯೆಗೆ ನೂತನ ಚಿಕಿತ್ಸೆಯನ್ನು ಇಂಗ್ಲೆಂಡ್‌ನ ಮೆಡಿಕಲ್ ರಿಸರ್ಚ್ ಕೌನ್ಸಿಲ್‌ನ ಸಂಶೋಧಕರು ಅಭಿವೃದ್ಧಿಪಡಿಸುತ್ತಿದ್ದಾರೆ.

ಯಕೃತ್‌ನ ತೀಕ್ಷ್ಣ ಸಮಸ್ಯೆಗೆ ಪ್ರಸ್ತುತ ಅಂಗಾಂಗ ಕಸಿ ಮಾಡುವುದೇ ಅಂತಿಮ ಎಂದು ಭಾವಿಸಲಾಗಿದೆ. ಹೆಪಟೈಟಿಸ್‌ನಂತಹ ಕಾಯಿಲೆಗೆ ಯಕೃತ್ ತುಂಬಾ ಘಾಸಿಗೊಳ್ಳುತ್ತದೆ. ಅದಕ್ಕೆ ಏನೇ ತೊಂದರೆಯಾದರೂ ಅದು ಮಾರಣಾಂತಿಕ ಪರಿಣಾಮ ಬೀರುವ ಸಾಧ್ಯತೆಯಿದೆ. ಇಂಗ್ಲೆಂಡ್‌ನಲ್ಲಿ ಇದರ ಪ್ರಮಾಣ ಐದರಲ್ಲಿ ಒಂದು ಭಾಗ. ಕಳೆದ 40 ವರ್ಷಗಳ ಅವಧಿಯಲ್ಲಿ 16 ಸಾವಿರ ಮಂದಿ ಯಕೃತ್ ಸಮಸ್ಯೆಯಿಂದ ಮೃತಪಟ್ಟಿದ್ದಾರೆ ಎಂದು ದಾಖಲಾಗಿದೆ. ಈಗ ಯಕೃತ್‌ನ ಅಂಗಾಂಶದಲ್ಲಿ ಏನಾದರೂ ತೊಂದರೆಯಾದರೆ, ಸಹಜವಾಗಿ ಅಂಗಾಂಶವನ್ನು ಅಭಿವೃದ್ಧಿಪಡಿಸುವ ಮೂಲಕ ಚಿಕಿತ್ಸೆ ನೀಡಬಹುದು ಎನ್ನುವುದು ಮೆಡಿಕಲ್ ರಿಸರ್ಚ್ ಕೌನ್ಸಿಲ್ ಸಂಶೋಧಕರ ಲೆಕ್ಕಾಚಾರ.

**–ಟಿಪ್ಸ್**